## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ನಾಥಾಲ್ ಬಸ್ತ್ಯಾಂವ್ ಫರ್ನಾಂಡಿಸ್, ಅಂದಿನ ಕಾರ್ಯದರ್ಶಿ, ಕಾನಸೂರ ಗ್ರಾಮ ಪಂಚಾಯಿತಿ, (ಪ್ರಸ್ತುತ ತ್ಯಾಗಲಿ ಗ್ರಾಮ ಪಂಚಾಯತಿ) ಸಿದ್ಧಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ಅಪರ ನಿಬಂಧಕರು ವಿಚಾರಣೆಗಳು–6, ಕರ್ನಾಟಕ ಲೋಕಾಯುಕ್ತ ಇವರ ಅರೆ ಸರ್ಕಾರಿ ಪತ್ರ ಡಿ.ಓ.ನಂ.ಕಂಪ್ಲೇಂಟ್/ಉಪಲೋಕ್/ಬಿಜಿಎಂ–5856/2013/ಎಆರ್ಇ–6, ದಿನಾಂಕ:04.03.2016

**ಪ್ರಸ್ತಾವನೆ:**

ಮೇಲೆ ಓದಲಾದ ಅಪರ ನಿಬಂಧಕರು ವಿಚಾರಣೆಗಳು–6, ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಮಾನ್ಯ ಉಪಲೋಕಾಯುಕ್ತರು ದಿನಾಂಕ: 02.03.2016 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯನ್ನು ಕಳುಹಿಸಿದ್ದು, ಸದರಿ ವರದಿಯಲ್ಲಿ ಶ್ರೀ ಗಜಾನನ ರಾಮ್ ನಾಯಕ್, ಗಟ್ಟಿಕೈ ಗ್ರಾಮ, ದೇವಿಸರ್ ಅಂಚೆ, ಸಿದ್ಧಾಪುರ ತಾಲ್ಲೂಕು ರವರು ಶ್ರೀಮತಿ ನಾಥಾಲ್ ಬಸ್ತ್ಯಾಂವ್ ಫರ್ನಾಂಡಿಸ್, ಅಂದಿನ ಕಾರ್ಯದರ್ಶಿ, ಕಾನಸೂರ ಗ್ರಾಮ ಪಂಚಾಯಿತಿ, (ಪ್ರಸ್ತುತ ತ್ಯಾಗಲಿ ಗ್ರಾಮ ಪಂಚಾಯತಿ) ಸಿದ್ಧಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ (ಎದುರುದಾರರು) ರವರ ವಿರುದ್ಧ 2011–12 ನೇ ಸಾಲಿನಲ್ಲಿ ಇಂದಿರಾ ಆವಾಜ್ ಯೋಜನೆ, ಬಸವ ವಸತಿ ಯೋಜನೆ ಹಾಗೂ ಮ.ಗಾ.ರಾ.ಗ್ರಾ.ಉ.ಖಾ.ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ಅವ್ಯವಹಾರವೆಸಗಿ ಸರ್ಕಾರದ ಹಣವನ್ನು ದುರುಪಯೋಗ ಮಾಡಿರುತ್ತಾರೆಂದು ದೂರಿರುತ್ತಾರೆ.

ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಿ, ತಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಅಲ್ಲಗಳೆದಿರುತ್ತಾರೆ. ನಂತರ, ದೂರುದಾರರ ಹೇಳಿಕೆಯನ್ನು ಮತ್ತೊಮ್ಮೆ ಪಡೆಯಲಾಗಿ, ಎದುರುದಾರರು ದಿನಾಂಕ 24.08.2010 ಮತ್ತು 16.09.2010 ರಂದು ನಡೆದ ಗ್ರಾಮಸಭೆಗಳ ನಡವಳಿಗಳಲ್ಲಿ ಸುರೇಶ ಪಾಲಂಕರ್, ನರಸಿಂಹ ಪೂಜಾರ್, ಸರ್ದಾ ಮಡಿವಾಳ್, ರಾಮಚಂದ್ರ ಗೌಡ, ರವಿ ಮಡಿವಾಳ್ ಮತ್ತು ಉಮಾಕಾಂತ ಹೆಗಡೆಯವರ ಫೋರ್ಜರಿ ಸಹಿಗಳನ್ನು ಪಡೆದಿರುತ್ತಾರೆ, 2012–13 ನೇ ಸಾಲಿನಲ್ಲಿ ಗವಿಸಂದ್ರದಿಂದ ಕೊಡ್ಲು ವರೆಗೆ ಹಾಲಿ ಇರುವ ರಸ್ತೆಯನ್ನು ನಿರ್ಮಾಣ ಮಾಡಿರುವುದಾಗಿ ರೂ.70,000/– ಗಳ ವೆಚ್ಚ ಭರಿಸಿರುತ್ತಾರೆ, ಕಾಮಗಾರಿ ನಿರ್ವಹಿಸದೆ ಬಾವಿಯನ್ನು ಹೂಳೆತ್ತುವುದಕ್ಕಾಗಿ ರೂ.79,829/– ವೆಚ್ಚ ಭರಿಸಿರುತ್ತಾರೆ, ಕೆಳಗಿನ ಕಲ್ಲಕಟ್ಟೆಯ ಹತ್ತಿರದ ರಸ್ತೆ ನಿರ್ಮಾಣಕ್ಕಾಗಿ ರೂ,3,92,000/– ವೆಚ್ಚ ಭರಿಸಿದ್ದು ವಾಸ್ತವವಾಗಿ ಕೇವಲ ರೂ.25,000/– ಗಳ ವೆಚ್ಚದ ಕಾಮಾಗಾರಿಯನ್ನು ನಿರ್ವಹಿಸಿರುತ್ತಾರೆ, ಕಾಮಗಾರಿ ನಿರ್ವಹಿಸದೆ ಮಾರ್ಕೆಟ್ ಯಾರ್ಡ ನಿರ್ಮಿಸಲು ರೂ.2 ಲಕ್ಷ ಹಾಗೂ ಗ್ರಾಮ ಪಂಚಾಯತಿ ಕಟ್ಟಡ ನಿರ್ಮಾಣಕ್ಕಾಗಿ ರೂ.74,708/– ವೆಚ್ಚ ಭರಿಸಿರುತ್ತಾರೆ ಎಂದು ದೂರುದಾರರು ದೂರಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ತನಿಖಾಧಿಕಾರಿಯನಾಗಿ ನೇಮಿಸಲಾಗಿ, ಸದರಿಯವರು ತನಿಕೆ ನಡೆಸಿ ಎದುರುದಾರರು ದಿನಾಂಕ 24.08.2010 ಮತ್ತು 16.09.2010 ರಂದು ನಡೆದ ಗ್ರಾಮಸಭೆಗಳ ನಡವಳಿಗಳಲ್ಲಿ ಸುರೇಶ ಪಾಲಂಕರ್, ನರಸಿಂಹ ಪೂಜಾರ್, ಸರ್ದಾ ಮಡಿವಾಳ್, ರಾಮಚಂದ್ರ ಗೌಡ, ರವಿ ಮಡಿವಾಳ್ ಮತ್ತು ಉಮಾಕಾಂತ ಹೆಗಡೆಯವರ ಫೋರ್ಜರಿ ಸಹಿಗಳನ್ನು ಪಡೆದಿರುವುದು ಹಾಗೂ ಮಾರ್ಕೆಟ್ ಯಾರ್ಡ ಕಟ್ಟಡ ಮತ್ತು ಗ್ರಾಮ ಪಂಚಾಯತಿ ಕನಸೂರು ಆಸ್ಪತ್ರೆ ಉಪಯೋಗಕ್ಕಾಗಿ ನಿರ್ಮಿಸಲಾದ ಕಟ್ಟಡಗಳನ್ನು ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅನುಮೋದನೆ ಪಡೆಯದೆ ಸದರಿ ಕಟ್ಟಡಗಳನ್ನು ಬಸ್ ತಂಗುದಾಣಗಳಾಗಿ ಉಪಯೋಗಿಸಲು ಅನುಮತಿ ನೀಡಿರುವುದಾಗಿ ವರದಿ ನೀಡಿರುತ್ತಾರೆ.

ಎದುರುದಾರರಾದ ಶ್ರೀಮತಿ ನಾಥಾಲ್ ಬಸ್ತ್ಯಾಂವ್ ಫರ್ನಾಂಡಿಸ್, ಅಂದಿನ ಕಾರ್ಯದರ್ಶಿ, ಕಾನಸೂರ ಗ್ರಾಮ ಪಂಚಾಯಿತಿ, (ಪ್ರಸ್ತುತ ತ್ಯಾಗಲಿ ಗ್ರಾಮ ಪಂಚಾಯತಿ) ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಶ್ರೀಮತಿ ನಾಥಾಲ್ ಬಸ್ತ್ಯಾಂವ್ ಫರ್ನಾಂಡಿಸ್, ಅಂದಿನ ಕಾರ್ಯದರ್ಶಿ, ಕಾನಸೂರ ಗ್ರಾಮ ಪಂಚಾಯಿತಿ, (ಪ್ರಸ್ತುತ ತ್ಯಾಗಲಿ ಗ್ರಾಮ ಪಂಚಾಯತಿ) ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 149 ಗ್ರಾಪಂಕಾ 2016 ಬೆಂಗಳೂರು, ದಿನಾಂಕ: 13.05.2016</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ನಾಥಾಲ್ ಬಸ್ತ್ಯಾಂವ್ ಫರ್ನಾಂಡಿಸ್, ಅಂದಿನ ಕಾರ್ಯದರ್ಶಿ, ಕಾನಸೂರ ಗ್ರಾಮ ಪಂಚಾಯಿತಿ, (ಪ್ರಸ್ತುತ ತ್ಯಾಗಲಿ ಗ್ರಾಮ ಪಂಚಾಯತಿ) ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957 ರ ನಿಯಮ 214 ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ವಿ.ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು,
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉತ್ತರ ಕನ್ನಡ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ಸಿದ್ದಾಪುರ ತಾಲ್ಲೂಕು ಪಂಚಾಯತಿ, ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ.
6. ಶ್ರೀಮತಿ ನಾಥಾಲ್ ಬಸ್ತ್ಯಾಂವ್ ಫರ್ನಾಂಡಿಸ್, ಅಂದಿನ ಕಾರ್ಯದರ್ಶಿ, ಕಾನಸೂರ ಗ್ರಾಮ ಪಂಚಾಯಿತಿ, (ಪ್ರಸ್ತುತ ತ್ಯಾಗಲಿ ಗ್ರಾಮ ಪಂಚಾಯತಿ) ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.